ಮೇಲೆ ಬಿತ್ತು. ನಾಗಕ್ಕನ ಸುದ್ದಿ ಕೇಳಿ, ಅದಾಗಲೇ ಬೆದರಿದ ಹರಿಣಿಯಂತಾಗಿದ್ದ ಪಾರು ಈಗ, "ಅಯ್ಯಯ್ಯೊ, ಅಯ್ಯಯ್ಯೋ... ಅಮ್ಮ ನಾ ಸತ್ತೆ... ಅಯ್ಯೋ" ಎಂದು ಬೊಬ್ಬಿಡುತ್ತಾ ಥಕಥೈ ಕುಣಿಯಲಾರಂಭಿಸಿದಳು.

ಜಗಲಿಯಲ್ಲಿ ಎಲೆ ಅಡಿಕೆ ಕುಟ್ಟುತ್ತಿದ್ದ ಅಜ್ಜಿ, ಅಂಗಳಕ್ಕೆ ಸೆಗಣಿ ಸಾರಿಸುತ್ತಿದ್ದ ದೊಡ್ಡಮ್ಮ, ದೈವದ ಕೋಣೆಯ ಜೇಡರಬಲೆ ತೆಗೆಯುತ್ತಿದ್ದ ಪಾರುವಿನ ಅಪ್ಪ ಗಿರಿಯಣ್ಣ, ಅಡುಗೆ ಮನೆಯಲ್ಲಿ ಅನ್ನ ಬಸಿಯುತ್ತಿದ್ದ ನಿರ್ಮಲ, ದನದ ಕೊಟ್ಟಿಗೆಯ ಹುಲ್ಲಿನ ರಾಶಿಯಲ್ಲಿ ಮಾವಿನ ಹಣ್ಣು ಬಚ್ಚಿಡುತ್ತಿದ್ದ ಸಚ್ಚಿ, ಗೋಪು ಎಲ್ಲರೂ ಗಾಬರಿಯಿಂದ ಅವರವರ ಕೆಲಸ ಬಿಟ್ಟು ಓಡಿ ಬಂದರು.

ಎಲ್ಲರೂ ಬರುವಷ್ಟರಲ್ಲಿ ಭಯದಿಂದ ಪಾರುವಿನ ಲಂಗ ಒದ್ದೆಯಾಗಿತ್ತು. ಪಾರು ತನಗೇ ಹೆದರಿದ್ದೆಂದು, ಗೊತ್ತಿಲ್ಲದ ಪಾಪದ ಹಲ್ಲಿ ಅವಳ ಅರಚಾಟಕ್ಕೆ ಸ್ವತಃ ಬೆದರಿ, ಕ್ಷಣ ಮಾತ್ರದಲ್ಲಿ ಪಕ್ಕದ ಮನೆಗೆ ಪಲಾಯನಗೈದಿತ್ತು.

"ಎಂಥ ಆಯ್ತು ಬಂಗಾರು" ನಿರ್ಮಲ ಗಾಬರಿಯಿಂದ ಮಗಳನ್ನು ಹಿಡಿದು ನಿಲ್ಲಿಸಿದಳು.

"ಚಿಕ್ಕಿ, ಅವಳ ಮೈಮೇಲೆ ಹಲ್ಲಿ ಬಿತ್ತು" ಎನ್ನುತ್ತಾ, ತನ್ನ ಮೇಲೆಯೇ ಬಿದ್ದಿದೆಯೆಂಬಂತೆ ಬಟ್ಟೆಯನ್ನು ಕೊಡವಿಕೊಂಡ ಚೇತು.

"ಈ ಹುಡುಗಿಗೆಂತ ಪಿರ್ಕಿಯ, ಹತ್ತು ವರ್ಷದ ಕುದುರೆ ಇವಳು, ಒಂದು ಹಲ್ಲಿ ಬಿದ್ದದ್ದಕ್ಕೆ

